ಓ.ಎಸ್ ನಂ.53/2023
ಡಿ.ಡಬ್ಲ್ಯೂ-1 ರವೀದ್ರ ತಂದೆ ಸಾತಲಿಂಗಪ್ಪ

**(ಇಂದು ದಿನಾಂಕಃ 22-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲು: ಶ್ರೀ ಎಂ ಬಿ ಪಿ ವಕೀಲರಿಂದ.

ನಾನು ಎಲೆಕ್ಟ್ರಿಕ ಮತ್ತು ಎಲೆಕ್ಟ್ರಾನಿಕ್ ಅಂಗಡಿ ಇಟ್ಟುಕೊಂಡು ಕಲಬುರಗಿಯಲ್ಲಿ ವ್ಯಾಪಾರ ಮಾಡುತ್ತೇನೆ. ನಾನು ೧೦ ನೇ ತರಗತಿ ಓದಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ ೧೧೭, ೨೪ ಮತ್ತು ೩೬ ಇರುತ್ತವೆ. ಈ ದಾವೆಯಲ್ಲಿ ಪಂಚಾಯತ ನಂಬರ ೭ ರ ಮನೆ ಕೂಡಾ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮನೆಯನ್ನು ನಮ್ಮ ತಂದೆ ಖರೀದಿಸಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆ ಯಾವ ವರ್ಷದಲ್ಲಿ ದಾವಾ ಮನೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯ ಮುಂದುವರೆದು ೧೯೮೪-೮೫ ರಲ್ಲಿ ಖರೀದಿಸಿರಬಹುದು ಎನ್ನುತ್ತಾರೆ. ನಮ್ಮ ತಂದೆ ಯಾರಿಂದ ಮತ್ತು ಎಷ್ಟು ಹಣಕ್ಕೆ ದಾವಾ ಮನೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಮನೆ ಕೂಡಾ ಹಿರಿಯರಿಂದ ಬಂದ ಆಸ್ತಿ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨. ದಾವಾ ಮನೆ ನಮ್ಮ ಹಿರಿಯರಿಂದ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಪಕ್ಷಗಾರರು ನನಗೆ ಗೊತ್ತು. ವಾದಿ ಮತ್ತು ೨ ರಿಂದ ೬ನೇ ಪ್ರತಿವಾದಿಗಳಾದ ನಾವು ಎಲ್ಲರೂ ಖಾಸಾ ಅಣ್ಣ-ತಮ್ಮಂದಿರು ಇದ್ದು, ೫ನೇ ಪ್ರತಿವಾದಿ ನಮ್ಮ ಸಹೋದರಿ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೆ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಆದ ಕುರಿತು ದಾಖಲೆಗಳನ್ನು ನಾನು

ಹಾಜರುಪಡಿಸಿರುತ್ತೇನೆ. ಸಾಕ್ಷಿಯು ನನಗೆ ತಿಳುವಳಿಕೆ ಬಂದಾಗಿನಿಂದ ನಾನು ನೋಡಿದಾಗ ಎಲ್ಲರೂ ಬೇರೆಯಾಗಿ ಇರುವುದನ್ನು ನೋಡಿರುತ್ತೇನೆ ಎನ್ನುತ್ತಾರೆ. ನಮ್ಮ ಕುಟುಂಬದಲ್ಲಿ ವಿಭಾಗ ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ದೇವರಾವ್ ಆಗಿರುತ್ತದೆ. ದೇವರಾವ್ ರವರಿಗೆ ೮ ಜನ ಮಕ್ಕಳು ಇರುತ್ತಾರೆ. ೧ನೇ ಪ್ರತಿವಾದಿಯಾದ ನಮ್ಮ ತಂದೆ ಸಾತಲಿಂಗಪ್ಪರವರನ್ನು ಹಿಡಿದು ನಮ್ಮ ಅಜ್ಜ ದೇವರಾವ್ ರವರಿಗೆ ೮ ಜನ ಮಕ್ಕಳಿರುತ್ತಾರೆ.

೩. ನಮ್ಮ ಅಜ್ಜ ದೇವರಾವ್ ರವರು ಪಾಲು ಮಾಡಿಕೊಟ್ಟ ಪ್ರಕಾರ ದಾವಾ ಆಸ್ತಿಗಳು ನಮ್ಮ ತಂದೆಯಾದ ೧ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿ ಅದೇ ಸಮಯದಲ್ಲಿ ನಮ್ಮ ಅಜ್ಜ ನಮ್ಮ ೫ ಜನ ಅಣ್ಣ-ತಮ್ಮಂದಿರಿಗೆ ಪಾಲು ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಸಮಯದಲ್ಲಿ ಆದ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ನಾವೆಲ್ಲರೂ ಒಪ್ಪಿಗೆ ನೀಡಿದ ಮೇಲೆ ನಮ್ಮ ಹೆಸರಿನಲ್ಲಿ ಬೇರೆಯಾಗಿ ಆಸ್ತಿಗಳಾಗಿರುತ್ತವೆ. ೧೯೮೨ ರಲ್ಲಿ ಸದರಿ ಪಾಲು ಆಗಿರುತ್ತದೆ. ನನ್ನ ಜನ್ಮ ದಿನಾಂಕ 20-06-1980 ಆಗಿರುತ್ತದೆ. ನಮ್ಮ ಹಿರಿಯ ಅಣ್ಣ ಸುಮಾರು ೧೬ ರಿಂದ ೧೮ ವರ್ಷ ಮೇಲೆ ವಯಸ್ಸು ೧೯೮೨ ರಲ್ಲಿ ಹೊಂದಿರಬಹುದು ನಾನೇ ನಮ್ಮ ಅಣ್ಣ-ತಮ್ಮಂದಿರಲ್ಲಿ ಚಿಕ್ಕವನಾಗಿರುತ್ತೇನೆ. ನಮ್ಮ ತಂದೆಗೂ ಕೂಡಾ ನಮ್ಮಷ್ಟೆ ಹಕ್ಕು ದಾವಾ ಆಸ್ತಿಗಳಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರ ಹೆಸರಲ್ಲೂ ಕೂಡಾ ಜಮೀನು ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ಕೂಡಾ ೨ ರಿಂದ ೫ನೇ ಪ್ರತಿವಾದಿಗಳಿಗೂ ಕೂಡಾ ವಾದಿ ಅಷ್ಟೆ ಸಮಾನ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

೪. ದಾವಾ ಆಸ್ತಿಗಳಲ್ಲಿ ಎಲ್ಲರಿಗೂ ಸಮಾನ ಪಾಲು ಇರುತ್ತದೆ ಎಂದರೆ ಸರಿ. ನಮ್ಮ ನಡುವೆ ಯಾವುದೇ ವಿಭಾಗ ಪತ್ರ ಆಗಿಲ್ಲ ಎಂದರೆ ಸರಿ. ನಿಡಿ-೭೫ ಮುಟೇಷನ್ ಪ್ರಕಾರ

ನಮ್ಮ ಅಜ್ಜ ತನ್ನ ಮಕ್ಕಳಿಗೆ ಪಾಲು ಮಾಡಿಕೊಟ್ಟಿರುತ್ತಾನೆ ಎಂದರೆ ಸರಿ. ಸಾಕ್ಷಿಯು ನಮ್ಮ ಅಜ್ಜನಿಂದ ನೇರವಾಗಿ ನಮಗೆ ಆಸ್ತಿ ಆಗಿರುತ್ತವೆ ಎನ್ನುತ್ತಾರೆ. ೧೯೮೨ ರಲ್ಲಿ ನಮ್ಮ ತಂದೆ ಸರಕಾರದ ಸೌಲಭ್ಯ ಪಡೆಯುವ ಸಲುವಾಗಿ ಮಾತ್ರ ನಮ್ಮೆಲ್ಲರ ಹೆಸರಿನಲ್ಲಿ ಜಮೀನು ಮಾಡಿರುತ್ತಾರೆ, ಅದು ಯಾವುದೇ ಪಾಲಿನ ಪ್ರಕಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪಾಲಿನ ಜಮೀನು ನಾನು ತೆಗೆದುಕೊಂಡಿರುತ್ತೇನೆ. ನನ್ನ ಸಹೋದರರ ಪಾಲಿನ ಜಮೀನು ಅವರುಗಳು ತೆಗೆದುಕೊಂಡಿರುತ್ತಾರೆ. ಅಳತೆಯ ಪ್ರಕಾರ ನಮ್ಮ ನಡುವೆ ಯಾವುದೇ ಪಾಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ೫ನೇ ಪ್ರತಿವಾದಿಯ ಮದುವೆ ಮಾಡಿಕೊಟ್ಟಿದ್ದರಿಂದ ಅವರು ಯಾವುದೇ ಪಾಲು ತೆಗೆದುಕೊಂಡಿರುವುದಿಲ್ಲ. ಕಾನೂನು ಪ್ರಕಾರ ೫ನೇ ಪ್ರತಿವಾದಿಗೂ ದಾವಾ ಆಸ್ತಿಗಳಲ್ಲಿ ಪಾಲು ಇರುತ್ತದೆ ಎಂದರೆ ಸರಿ.

೫. ನಮ್ಮ ತಂದೆ ಮತ್ತು ಅವರ ಮಕ್ಕಳಾದ ನಮ್ಮ ನಡುವೆ ಯಾವುದೇ ವಿಭಾಗ ಪತ್ರ ಆಗಿಲ್ಲ ಎಂದರೆ ಸಾಕ್ಷಿಯು ಅದು ಆದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಅವರವರ ಪಾಲು ಅವರು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. 2012 ರ ಮುಂಚಿನಿಂದ ನಮ್ಮ ತಂದೆ ನನ್ನ ಹತ್ತಿರವೇ ಇರುತ್ತಾರೆ. ನಮ್ಮ ತಂದೆ ಒಕ್ಕಲುತನ ಮಾಡುತ್ತಿದ್ದರು. ನಮ್ಮ ತಂದೆ ಆಳುಗಳ ಮೂಲಕ ದಾವಾ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆಗೆ ಈಗ ಸುಮಾರು ೯೦ ವರ್ಷ ವಯಸ್ಸಿರಬಹುದು. ನನ್ನ ಪ್ರತಿವಾದ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದ ಪತ್ರವನ್ನು ಬರೆಯಲು ನನ್ನ ಜೊತೆಗೆ ೩ ಮತ್ತು ೪ನೇ ಪ್ರತಿವಾದಿಗಳು ಕೂಡಾ ಮಾಹಿತಿ ನೀಡಿರುತ್ತಾರೆ. ನಮ್ಮ ತಂದೆಗೆ ಕಿವಿ ಕೇಳದೆ ಇದ್ದರಿಂದ ಅವರ ಮಾಹಿತಿ ಪಡೆಯದೆ ನಾವೆ ಪ್ರತಿವಾದ ಪತ್ರ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ರೂ.೨೪,೦೦,೦೦೦/- ನಾವು ತಿಳಿಸಿದಂತೆ ಯಾವುದೇ ಸಾಲ ಮಾಡಿಲ್ಲ ಎಂದರೆ ಸರಿಯಲ್ಲ.

೬.	ನನ್ನ ಮುಖ್ಯ ವಿಚಾರಣೆಯ ವಿಷಯಗಳು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ನಮ್ಮ ತಂದೆ ರೂ.೧೮,೦೦,೦೦೦/- ಸಾಲ ಪಡೆದ ಬಗ್ಗೆನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಲಾಗಿದೆ ಎಂದರೆ ಸರಿ. ನಮ್ಮ ತಂದೆಗೆ ಯಾವುದೇ ಸಾಲ ಇರದೆ ಇದ್ದರೂ ಪ್ರತಿವಾದ ಪತ್ರದಲ್ಲಿ ರೂ.೨೪,೦೦,೦೦೦/- ಸಾಲ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ರೂ.೧೮,೦೦,೦೦೦/- ಸಾಲ ಇರುವುದಾಗಿ ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಕಾನೂನಿನ ಕುರಿತು ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಖಂಡಿಕೆ-೭ ರಲ್ಲಿ ಬರೆದ ಮಿತಾಕ್ಷರದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ವಿಷಯಗಳು ಸುಳ್ಳು ಇದ್ದು, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

೭.	ಸರ್ವೆ ನಂಬರ ೩೬/೩ ರ ೪ ಎಕರೆ ೧೨ ಗುಂಟೆ ಮತ್ತು ೫ ಎಕರೆ ಜಮೀನಿನ ಕುರಿತು ಬಸವರಾಜ ಮತ್ತು ಉಮಾದೇವಿರವರಿಗೆ ಸಂಬಂಧಿಸಿದ ನಿಡಿ-೬೦ ರಿಂದ ನಿಡಿ-೬೪ ದಾಖಲೆಗಳು ನಮಗೆ ಸಂಬಂಧಿಸಿದವು ಅಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.